ಮಲಪ್ರಭಾ ಮತ್ತು ಘಟಪ್ರಭಾ ಕಮಾಂಡ್ ಏರಿಯಾದಲ್ಲಿ ಮೀನುಗಾರಿಕೆ ಅಭಿವೃದ್ಧಿ ಬಗ್ಗೆ

552 (687) ಶ್ರೀ ಶಿವಾನಂದ ಹೆಚ್. ಕೌಜಲಗಿ:- (ಬೈಲಹೊಂಗಲ) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಲಪ್ರಭಾ ಮತ್ತು ಘಟಪ್ರಭಾ ನದಿ ದಂಡೆಯ ಮೇಲೆ ಬರುವ ಕಮಾಂಡ್ ಗ್ರಾಮಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಪಡಿಸಲು ಸಾಕಷ್ಟು ಸವಲತ್ತುಗಳನ್ನು ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೆ; ಹಾಗಿದ್ದಲ್ಲಿ ಇಲ್ಲಿ ಮೀನುಗಾರಿಕೆ ಅಭಿವೃದ್ಧಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗುವುದು;

ಆ) ಬೆಳಗಾಂ ಜಿಲ್ಲೆಯಲ್ಲಿ ಮೀನುಗಾರಿಕೆ ಸಲುವಾಗಿ ಎಲ್ಲೆಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಮತ್ತು ಇಲ್ಲಿ ಮೀನುಗಾರರಿಗೆ ಯಾವ ಯಾವ ಸೌಲತ್ತುಗಳನ್ನು ಒದಗಿಸಲಾಗಿದೆ.

ಇ) ಮಲಪ್ರಭಾ ಮುಳುಗಡೆ ಪ್ರದೇಶದ ಮೀನುಗಾರಿಕೆ ಬೈಲಹೊಂಗಲ ಮತ್ತು ಸೌಂದತ್ತಿ ತಾಲ್ಲೂಕಿನಲ್ಲಿ ಮೀನುಗಾರರಿಗೆ ವಾಪಿಸಲು ಪುನರ್ ವಸತಿ ಪ್ರದೇಶದಲ್ಲಿ ಯಾವ ಯಾವ ಸವತ್ತುಗಳನ್ನು ಒದಗಿಸಲಾಗಿದೆ; (ಇದರ ಬಗ್ಗೆ ವಿವರಣೆ ನೀಡುವುದು)

ಈ) ಬೆಳಗಾಂ ಜಿಲ್ಲೆಯಲ್ಲಿರುವ ಸಣ್ಣ ಸಣ್ಣ ಕೆರೆಗಳಲ್ಲಿ ಮತ್ತು ನೀರಾವರಿ ಟ್ಯಾಂಕ್‌ಗಳಲ್ಲಿ ಸರ್ಕಾರದವರೆ ಮೀನಿನ ಮರಿಗಳನ್ನು ಬಿಡಲು ಕ್ರಮ ಕೈಗೊಳ್ಳುವರೇ?

ಶ್ರೀ ಎ. ಎಂ. ಬೆಳ್ಳಿಯಪ್ಪ:- (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ರಾಜ್ಯ ಮಂತ್ರಿಗಳು)

ಅ) ಸರ್ಕಾರದ ಗಮನಕ್ಕೆ ಬಂದಿದೆ. 'ಕಾಡಾ' ನಲ್ಲಿ 21,200 ಹೆಕ್ಟೇರ್‌ಗಳ ಜಲಪ್ರದೇಶವು ಮಲಪ್ರಭಾ ಮತ್ತು ಘಟಪ್ರಭಾ ಜಲಾಶಯಗಳಿಂದಲೂ ಹಾಗೂ ಸುಮಾರು 3,600 ಜಲವಿಸ್ತೀರ್ಣವುಳ್ಳ 88 ದೊಡ್ಡಕೆರೆಗಳು ಮತ್ತು 176 ಕೆರೆಗಳಿಂದಲೂ ಕೂಡಿದೆ.

ಈ ಅಚ್ಚುಕಟ್ಟು ಪ್ರದೇಶದಲ್ಲಿ "ಕಾಡಾ" ಅನುಧಾನದಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು ಅಲ್ಲದೆ ಮೀನುಗಾರಿಕೆ ಇಲಾಖೆಯ ಯೋಜನೆಗಳ ಮೂಲಕವೂ ಮಲಪ್ರಭಾ ಮತ್ತು ಘಟಪ್ರಭಾದ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಟ್ಟು ಬೆಳಗಾಂ, ಧಾರವಾಡ ಹಾಗೂ ಬಿಜಾಪುರ ಜಿಲ್ಲೆಗಳ ತಾಲ್ಲೂಕುಗಳಲ್ಲಿ ಮೀನುಗಾರಿಕೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ:_

1. ಜಲಾಶಯ ಮೀನುಗಾರಿಕೆ ಅಭಿವೃದ್ಧಿ
2. ನದಿ ಮೀನುಗಾರಿಕೆ
3. ವಿಶೇಷ ಘಟಕ ಯೋಜನೆಗಳು
4. ಕೇಜ್ ಮತ್ತು ಪೆನ್ ಕಲ್ಚರ್
5. ಖಾಸಗಿಯವರ ಸ್ವಂತ ಜಮೀನಿನಲ್ಲಿ, ಜಲಪ್ರದೇಶಗಳಲ್ಲಿ, ಬತ್ತದ ಗದ್ದೆಗಳಲ್ಲಿ ಮತ್ಸ್ಯಾಲಯಗಳ ಮೀನುಕೊಳಗಳ ನಿರ್ಮಾಣ.
6. ಮೀನುಗಾರಿಕೆ ಸಲಕರಣೆಗಳಿಂದ ನೈಲಾನ್‌ಬಲೆಗಳು, ಕಾರೇಕಲ್ಸ್, ಸೈಕಲ್, ಮೀನು ಸಾಗಾಣಿಕೆ ಪೆಟ್ಟಿಗೆಗಳು ಇತ್ಯಾದಿಗಳನ್ನು ಕೊಳ್ಳಲು ಮೀನುಗಾರರಿಗೆ ಆರ್ಥಿಕ ನೆರವು;
7. ಕಾಡಾ ಪ್ರದೇಶದಲ್ಲಿ ಬರುವ ಮೀನುಗಾರರ ಸಹಕಾರ ಸಂಘಗಳಿಗೆ ಶೇಕಡ 50 ರಷ್ಟು ಸಹಾಯಧನವನ್ನು ಮೀನುಮರಿಗಳಿಗೆ ಹಾಗೂ ಸಲಕರಣೆಗಳಿಗಾಗಿ ಪೂರೈಸುವುದು.
8. ತಾಲ್ಲೂಕು ಮಟ್ಟದ ಮೀನುಮರಿ ಕೇಂದ್ರದಲ್ಲಿನ ಮೀನು ಕೊಳಗಳ ನಿರ್ಮಾಣ ಮತ್ತು ದುರಸ್ತಿ ಕಾರ್ಯಕ್ರಮ.

ಆ) ಬೆಳಗಾಂ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಮೀನುಮರಿ ವಿತರಣೆ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ. ಅಷ್ಟೇ ಅಲ್ಲದೆ ಈ ಕೆಳಗಿನ ಮೀನುಗಾರಿಕೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪ್ರಸಕ್ತ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ:-

ಮೀನುಗಾರಿಕೆ ಇಲಾಖೆ ಯೋಜನೆಗಳು

1.	ಮೀನುಮರಿ ಉತ್ಪಾದನೆ, ಪಾಲನೆ, ವಿತರಣೆ	:	4.35 ಲಕ್ಷ ರೂ.
2.	ಮೀನುಗಾರಿಕೆ ಉಪಕರಣಗಳನ್ನು ಕೊಳ್ಳಲು ಮೀನುಗಾರರಿಗೆ ಆರ್ಥಿಕ ನೆರವು ನೀಡುವುದು	:	0.20 ಲಕ್ಷ ರೂ.
3.	ವಸ್ತು ಪ್ರದರ್ಶನ	:	0.25 ಲಕ್ಷ ರೂ.
	ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಗಳು		
4.	ರಾಕ್ಷಸಕೊಪ್ಪದಲ್ಲಿ 2 ಮೀನು ಸಂಗ್ರಹಣಾ ಕೊಳಗಳ ನಿರ್ಮಾಣ	:	2.00 ಲಕ್ಷ ರೂ.
5.	ಕಿತ್ತೂರು ತಾಲ್ಲೂಕು ಬೂತರ ಮಟ್ಟಿಯಲ್ಲಿ ಮತ್ಸ್ಯಾಲಯ ನಿರ್ಮಾಣ	:	4.00 ಲಕ್ಷ ರೂ.
6.	ಬೈಲಹೊಂಗಲದಲ್ಲಿ ತಾಲ್ಲೂಕು ಮಟ್ಟದ ನರ್ಸರಿಯಲ್ಲಿ ಪ್ಯಾಕಿಂಗ್ ಶೆಡ್ ನಿರ್ಮಾಣ	:	2.00 ಲಕ್ಷ ರೂ.

ಬರಗಾಲ ಪೀಡಿತ ಪ್ರದೇಶಾಭಿವೃದ್ಧಿ ಯೋಜನೆಗಳು

7.	ರಾಮದುರ್ಗ ನರ್ಸರಿಯಲ್ಲಿ ಎರಡು ಮೀನು ಕೊಳಗಳ ನಿರ್ಮಾಣ	:	1.40 ಲಕ್ಷ ರೂ.
8.	ಬೆರಳುದ್ದ ಮೀನುಮರಿಗಳ ಉತ್ಪಾದನೆ ಮತ್ತು ಮೀನುಮರಿಗಳ ಪೂರೈಕೆ (ಡಿಪಿಎ ಕಾರ್ಯಕ್ರಮ)	:	0.20 ಲಕ್ಷ
9.	ಸೌಂದತ್ತಿಯಲ್ಲಿ ಮೀನುಕೊಳಗಳ ನಿರ್ಮಾಣ (ಡಿಪಿಎ ಕಾರ್ಯಕ್ರಮಗಳಡಿ) :	:	0.40 ಲಕ್ಷ ರೂ.

ಇ) ಮಲಪ್ರಭಾ ಮುಳುಗಡೆ ಪ್ರದೇಶದ ಮೀನುಗಾರರಿಗೆ, ಬೈಲಹೊಂಗಲ ಮತ್ತು ಸೌಂದತ್ತಿ ತಾಲ್ಲೂಕಿನಲ್ಲಿ ಪುನರ್ವಸತಿ ಕಲ್ಪಿಸುವ ಬಗ್ಗೆ ಮೀನುಗಾರಿಕೆ ಇಲಾಖೆಯಿಂದ ಯಾವ ಕ್ರಮವನ್ನು ಕೈಗೊಂಡಿರುವುದಿಲ್ಲ. ಯಾವುದೇ ಮುಳುಗಡೆ ಪ್ರದೇಶದ ಏಲ್ಲಾ ಜನರಿಗೆ ಪುನರ್ವಸತಿ ಕಲ್ಪಿಸುವುದು, ಕಂದಾಯ ಹಾಗೂ ನೀರಾವರಿ ಇಲಾಖೆಗಳಿಗೆ ಸಂಬಂಧಿಸಿದ ವಿಷಯವಾಗಿರುತ್ತದೆ.

ಈ) ಬೆಳಗಾಂ ಜಿಲ್ಲೆಯಲ್ಲಿರುವ ಸಣ್ಣ ಸಣ್ಣ ಕೆರೆಗಳಲ್ಲಿ ಮತ್ತು ನೀರಾವರಿ ಟ್ಯಾಂಕ್‌ಗಳಲ್ಲಿ ಮೀನುಮರಿಗಳನ್ನು ಬಿಡುವ ಬಗ್ಗೆ ಬೆಳಗಾವಿ ಜಿಲ್ಲಾ ಪರಿಷತ್ ಕ್ರಮ ಕೈಗೊಂಡಿದೆ. ಬೆಳಗಾವಿ ಜಿಲ್ಲೆಯ 70 ಸಣ್ಣ ಕೆರೆಗಳಲ್ಲಿ 11,35,000 ಮೀನುಮರಿಗಳನ್ನು ಬೆಳಗಾವಿ ಜಿಲ್ಲಾ ಪರಿಷತ್ ಸಂಗ್ರಹಿಸಿದೆ.

ಸಿಂಧನೂರು ವ್ಯಾಪ್ತಿಯಲ್ಲಿ ಬರುವ ಸರ್ವೆ ನಂಬರುಗಳ ಬಗ್ಗೆ

554 (691) ಶ್ರೀ ಬಿ. ಪಂಪನಗೌಡ:- (ಸಿಂಧನೂರು) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಿಂಧನೂರು ವ್ಯಾಪ್ತಿಯಲ್ಲಿ ಬರುವ ಸ.ನಂ. 768 ಮತ್ತು 2 ಇದು ಸರ್ಕಾರಿ ಭೂಮಿಯೇ ಅಥವಾ ಖಾಸಗಿ ಭೂಮಿಯೇ?

ಆ) ಸರ್ಕಾರಿ ಭೂಮಿಯಾಗಿದ್ದರೆ ಆ ಜಾಗದಲ್ಲಿ ಕಟ್ಟಿರುವ ಕಟ್ಟಡದ ಮಾಲೀಕರಿಗೆ ಆ ಜಾಗವನ್ನು ಸಕ್ರಮಗೊಳಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಇ) ರಾಯಚೂರು ಪಟ್ಟಣದ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಭೂಮಿಯೆಷ್ಟು? ಈ ಸರ್ಕಾರಿ ಭೂಮಿಯಲ್ಲಿರುವ ಅಧಿಕೃತ ಕಟ್ಟಡಗಳೆಷ್ಟು? (ಅದರ ಮಾಲೀಕರು ಮತ್ತು ವಿಳಾಸ ತಿಳಿಸುವುದು)

ಈ) ಅನಧಿಕೃತ ಕಟ್ಟಡಗಳಿದ್ದರೆ, ಅವುಗಳನ್ನು ಸಕ್ರಮಗೊಳಿಸುವ ಉದ್ದೇಶ ಸರ್ಕಾರಕ್ಕಿದೆಯೇ?